UASB
LIBRARY
Newspaper Clippings
Pg .1 Tuesday 19-10-2021 Jai Kisan



ಕೃಷಿ ಬೆಳೆಗಳ ಸುಧಾರಿತ ಬೇಸಾಯ ಪದ್ಧತಿ ಕೃತಿಗೆ ಉತ್ತಮ ಸ್ಪಂದನೆ!

5ನೇ ಮುದ್ರಣ ಸಿದ್ಧತೆ | 2.85 ಲಕ್ಷ ಮಂದಿಗೆ ಪಿಡಿಎಫ್ ಹಂಚಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಕೊರೋನಾ ಸಮಯದಲ್ಲಿ ಹೊರತಂದ 'ಕೃಷಿ ಬೆಳೆಗಳ ಸುಧಾರಿತ ಬೇಸಾಯ ಪದ್ಧತಿಗಳು' ಕೃತಿ ದಾಖಲೆಯ ನಾಲ್ಕು ಮುದ್ರಣವನ್ನು ಕಂಡು ಐದನೇ ಮುದ್ರಣಕ್ಕೆ ಸಿದ್ಧವಾಗುತ್ತಿದೆ. ಅಷ್ಟೇ ಅಲ್ಲ, ಪಿಡಿಎಫ್ ರೂಪದಲ್ಲಿ 2.85 ಲಕ್ಷ ಆಸಕ್ತರು, ರೈತರಿಗೆ ತಲುಪಿರುವುದು ಹೆಗ್ಗಳಿಕೆಯಾಗಿದೆ. ಪುಸ್ತಕವೊಂದಕ್ಕೆ ಈ ರೀತಿ ಪ್ರತಿಕ್ರಿಯೆ ದೊರೆತಿರುವುದು ವಿವಿ ವಲಯದಲ್ಲಿ ಆಶ್ಚರ್ಯದ ಜೊತೆಗೆ ಸಂತಸವನ್ನೂ ಉಂಟು ಮಾಡಿದೆ.

ಕೃಷಿ ವಿವಿಯು ಕೃಷಿ ಇಲಾಖೆ ಸಹಯೋಗ ಮತ್ತು ಡಾ। ಕೆ.ಶಿವರಾಮು ಅವರು ಸಂಪಾದಕತ್ವದಲ್ಲಿ ಕೃತಿ ಹೊರತಂದಿತ್ತು. 220 ಪುಟಗಳ ಈ ಪುಸ್ತಕದ ಬೆಲೆ 200 ರುಪಾಯಿಗಳಾಗಿವೆ. 2020ರ ಆಗಸ್ಟ್‌ನಲ್ಲಿ ಕೊರೋನಾ ಮೊದಲನೇ ಅಲೆ ಸಂದರ್ಭದಲ್ಲಿ ಸಾವಿರ ಪ್ರತಿಗಳ ಮೊದಲ ಮುದ್ರಣ ಕಂಡಿತು. ಪುಸ್ತಕದ ಉಪಯುಕ್ತತೆ ಬಗ್ಗೆ ಜನರಿಂದ ಜನರಿಗೆ ಮಾಹಿತಿ ಪ್ರಸಾರವಾಗಿ ನಂತರ 2021ರಲ್ಲಿ ಇಲ್ಲಿಯವರೆಗೂ ಮೂರು ಮುದ್ರಣ ಕಂಡಿದೆ. ಇದೀಗ ಐದನೇ ಮುದ್ರಣಕ್ಕೆ ಸಿದ್ಧತೆ ನಡೆದಿದೆ.

ವಿವಿ ವ್ಯಾಪ್ತಿಯ ಚಿಕ್ಕಬಳ್ಳಾಪುರ, ಹಾಸನ, ತುಮಕೂರು, ರಾಮನಗರ, ಚಾಮರಾಜನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಕೋಲಾರ ಮತ್ತು ಮೈಸೂರು ಜಿಲ್ಲೆಗಳ ಹವಾಗುಣ, ವಿವಿಧ ತಿಂಗಳಲ್ಲಿ ಮಳೆ ಪ್ರಮಾಣ, ಮಳೆ ದಿನ ಮತ್ತು ಉಷ್ಣಾಂಶ, ಏಕದಳ-ದ್ವಿದಳ ಧಾನ್ಯ, ಎಣ್ಣೆಕಾಳು, ವಾಣಿಜ್ಯ ಬೆಳೆಗಳ ವಿಶೇಷ ಗುಣಗಳು, ಸಮಗ್ರ ಕೀಟ ನಿರ್ವಹಣೆ, ಸಮಗ್ರ ಪೋಷಕಾಂಶ, ಇಳುವರಿ ಮುಂತಾದ ಮಾಹಿತಿಗಳನ್ನು ಪುಸ್ತಕ ಒಳಗೊಂಡಿದೆ.

ಕೃಷಿ ವಿವಿಯಲ್ಲಿ ದೊರೆಯುವ ಸೌಲಭ್ಯ, ಆಧುನಿಕ ತಂತ್ರಜ್ಞಾನ, ವಿವಿಧ ತಳಿಗಳು, ಹನಿ ನೀರಾವರಿ ಪದ್ಧತಿ, ನೀರಾವರಿ ಮತ್ತು ಮಳೆಯಾಶ್ರಿತ ಬೆಳೆಗಳು, ಮಿಶ್ರ ಬೆಳೆ, ಗೊಬ್ಬರದ ಬಳಕೆ, ಅಂತರ ಬೇಸಾಯ, ಕಳೆ



ಕೃಷಿ ಬೆಳೆಗಳ ಸುಧಾರಿತ ಬೇಸಾಯ ಪದ್ಧತಿಗಳು ಪುಸ್ತಕ ಕೃಷಿಯ ಜ್ಞಾನ ಭಂಡಾರವಾಗಿದೆ. ಈಗ ಮೊಬೈಲ್‌ನಲ್ಲೇ ಲಭ್ಯವಿರುವುದರಿಂದ ವಿಜ್ಞಾನಿಗಳು ಮತ್ತು ವಿಸ್ತರಣಾ ಅಧಿಕಾರಿಗಳು ತಕ್ಷಣ ರೈತರಿಗೆ ಸೂಕ್ತ ಪರಿಹಾರ ತಿಳಿಸಬಹುದು. ಕೃಷಿಕರು ತಮ್ಮ ಸಮಸ್ಯೆಗಳಿಗೆ ಮೊಬೈಲ್‌ನಲ್ಲೇ ವೀಕ್ಷಿಸಿ ಪರಿಹಾರ ಕಂಡುಕೊಳ್ಳಬಹುದು. ಶ್ರಮ, ಸಮಯ, ಹಣದ ಉಳಿತಾಯವಾಗುತ್ತದೆ.

• **ರಾಜೇಂದ್ರಪ್ರಸಾದ್** ಕೃಷಿ ವಿವಿ ಕುಲಪತಿ

ನಿರ್ವಹಣೆ ಮತ್ತಿತರ ಉಪಯುಕ್ತ ಮಾಹಿತಿಯನ್ನು ಕೃತಿ ಒಳಗೊಂಡಿದ್ದು ಕೃಷಿ ಉತ್ಪಾದನೆ ಹೆಚ್ಚಳವಾಗಲು ಸಹಾಯಕವಾಗಿದೆ. ಪಿಡಿಎಫ್ ರೂಪದಲ್ಲಿ ಪುಸ್ತಕ ಲಭ್ಯವಾದರೆ ಹೆಚ್ಚು ಪ್ರತಿಗಳು ಮಾರಾಟವಾಗುವುದಿಲ್ಲ ಎಂದು ಕೆಲವರು ಸಲಹೆ ನೀಡಿದರೂ ಸಹ ಕೃಷಿಕರಿಗೆ ಅನುಕೂಲವಾಗಲಿ ಎಂಬ ಸದುದ್ದೇಶದಿಂದ 2.85 ಲಕ್ಷಕ್ಕೂ ಅಧಿಕ ಆಸಕ್ತರಿಗೆ ವಾಟ್ಸಪ್‌ನಲ್ಲಿ ಪುಸ್ತಕದ ಪಿಡಿಎಫ್ ರೂಪವನ್ನು ರವಾನಿಸಲಾಗಿದೆ.

19-10-2021 Kp Pg 05

ನ.11ರಿಂದ ಕೃಷಿ ಮೇಳ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ನ.11ರಿಂದ 14ರವರೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ(ಜಿಕೆವಿಕೆ) ಆವರಣದಲ್ಲಿ ಕೃಷಿ ಮೇಳ ಆಯೋಜಿಸಲಾಗಿದೆ. ಕೋವಿಡ್ ನಿಯಮಗಳ ಅನುಸಾರ ಮೇಳ ನಡೆಯಲಿದ್ದು, ಭೌತಿಕವಾಗಿ ಮತ್ತು ಸಾಮಾಜಿಕ ಜಾಲತಾಣಗಳಲ್ಲೂ ವೀಕ್ಷಿಸಬಹುದಾಗಿದೆ. ಕೃಷಿ ವಿವಿ ಹೊರ ತಂದಿರುವ ನೂತನ 10 ತಳಿ ಮತ್ತು 28 ಕೃಷಿ ತಂತ್ರಜ್ಞಾನಗಳನ್ನು ಬಿಡುಗಡೆಗೊಳಿಸಲಾಗುತ್ತದೆ. ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿದ ರೈತರಿಗೆ ರಾಜ್ಯ, ಜಿಲ್ಲಾ ಮತ್ತು ತಾಲೂಕು ಮಟ್ಟದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುವುದು. ಕೃಷಿ ವಸ್ತು ಪ್ರದರ್ಶನದಲ್ಲಿ ಆಧುನಿಕ ಕೃಷಿ ತಂತ್ರಜ್ಞಾನಗಳು, ಕೃಷಿ ಎಂಜಿನಿಯರಿಂಗ್ ಮತ್ತು ಕೃಷಿ ಪರಿಕರಗಳ ಸುಮಾರು 250 ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗುವುದು. ರೈತರು ತಮ್ಮ ಕೃಷಿ ಸಮಸ್ಯೆಗಳಿಗೆ ತಜ್ಞರಿಂದ ಸಲಹೆ ಪಡೆಯಬಹುದು. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ರೈತ ಬಾಂಧವರು ಮತ್ತು ಸಾರ್ವಜನಿಕರು ಕೃಷಿಮೇಳದಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಳ್ಳಬೇಕು ಎಂದು ವಿವಿ ಪ್ರಕಟಣೆ ತಿಳಿಸಿದೆ.

19-10-2021 Kp Pg 02

ನ. 11ರಿಂದ ಕೃಷಿ ಮೇಳ

ಬೆಂಗಳೂರು: ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ನವೆಂಬರ್ 11ರಿಂದ 14ರವರೆಗೆ ಕೃಷಿ ಮೇಳವನ್ನು ಆಯೋಜಿಸಲಾಗುತ್ತಿದೆ. ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳ ಸಹಕಾರದೊಂದಿಗೆ ಕೃಷಿ ಮೇಳವನ್ನು ಕೋವಿಡ್-19, ನಿಯಮಗಳ ಅನುಸಾರ ನಾಲ್ಕು ದಿನಗಳ ಕಾಲ ಆಯೋಜಿಸಿರುತ್ತದೆ. ಕೃಷಿ ಮೇಳವನ್ನು ಭೌತಿಕವಾಗಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ವೀಕ್ಷಿಸಬಹುದು. ಕೃಷಿ ಮೇಳದಲ್ಲಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಹೊರತಂದಿರುವ ನೂತನ 10 ತಳಿಗಳು ಮತ್ತು 28 ಕೃಷಿ ತಂತ್ರಜ್ಞಾನಗಳನ್ನು ಬಿಡುಗಡೆಗೊಳಿಸಲಾಗುತ್ತದೆ. ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿದ ರೈತರಿಗೆ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕುಮಟ್ಟದಪ್ರಶಸ್ತಿಗಳನ್ನು ನೀಡಿಸನ್ಮಾನಿಸಲಾಗುವುದು.

ಕೃಷಿಮಸ್ತುಪ್ರದರ್ಶನದಲ್ಲಿಆಧುನಿಕಕೃಷಿತಂತ್ರಜ್ಞಾನಗಳು, ಕೃಷಿ ಇಂಜಿನಿಯರಿಂಗ್ ಮತ್ತು ಕೃಷಿ ಪರಿಕರಗಳ ಸುಮಾರು 250 ಮಳಿಗೆಗಳಿರುತ್ತವೆ. ರೈತರು ತಮ್ಮ ಕೃಷಿ ಸಮಸ್ಯೆಗಳಿಗೆ ತಜ್ಞರಿಂದ ಸಲಹೆಯನ್ನು ಪಡೆದುಕೊಳ್ಳಬಹುದು. ಜಿ.ಕೆ.ವಿ.ಕೆಯ ಮಹಾದ್ವಾರದಿಂದ ಕೃಷಿ ಮೇಳದ ಸಭಾಂಗಣಕ್ಕೆ ತಲುಪಲು ಬಸ್ಸುಗಳಲ್ಲಿ ಉಚಿತ ಸಾರಿಗೆ ವ್ಯವಸ್ಥೆ. ಪ್ರವೇಶ ಉಚಿತವಾಗಿರುತ್ತದೆ ಎಂದು ತಿಳಿಸಲಾಗಿದೆ.

19-10-2021 Sk Pg 03

For more information visit
University Library Website
Web - uasbagrilibindia.org
E-mail- librarian@uasbangalore.edu.in

ನ.11ರಿಂದ ಕೃಷಿ ಮೇಳ

ಬೆಂಗಳೂರು, ಅ.18: ಕೃಷಿ ವಿಶ್ವವಿದ್ಯಾನಿಲಯ ಸರಕಾರದ ವಿವಿಧ ಇಲಾಖೆಗಳ ಸಹಕಾರದೊಂದಿಗೆ 2021ರ ಸಾಲಿನ ಕೃಷಿ ಮೇಳವನ್ನು ನ.11ರಿಂದ 14ರವರೆಗೆ ಹಮ್ಮಿಕೊಂಡಿದೆ.

ಕೃಷಿ ವಿಶ್ವವಿದ್ಯಾನಿಲಯ ಹೊರತಂದಿರುವ ನೂತನ 10 ತಳಿಗಳು ಮತ್ತು 28 ಕೃಷಿ ತಂತ್ರಜ್ಞಾನಗಳನ್ನು ಬಿಡುಗಡೆಗೊಳಿಸಲಿದೆ ಹಾಗೂ ಕೃಷಿ ಇಂಜಿನಿಯರಿಂಗ್ ಮತ್ತು ಕೃಷಿ ಪರಿಕರಗಳ ಸುಮಾರು 250 ಮಳಿಗೆಗಳನ್ನು ಪ್ರದರ್ಶಿಸಲಿದೆ.

ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿದ ರೈತರಿಗೆ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಗುವುದು ಹಾಗೂ ರೈತರು ತಮ್ಮ ಕೃಷಿ ಸಮಸ್ಯೆಗಳಿಗೆ ತಜ್ಞರಿಂದ ಸಲಹೆಯನ್ನು ಸ್ಥಳದಲ್ಲೇ ಪಡೆದುಕೊಳ್ಳಬಹುದು ಎಂದು ಕೃಷಿ ವಿಶ್ವವಿದ್ಯಾನಿಲಯದ ವಿಸ್ತಾರಣಾ ನಿರ್ದೇಶಕ ಡಾ.ಎನ್ .ದೇವಕುಮಾರ್ ತಿಳಿಸಿದ್ದಾರೆ.

ಮೇಳವು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ(ಜಿಕೆವಿಕೆ) ಆವರಣದಲ್ಲಿ ನಡೆಯಲಿದ್ದು, ಭೌತಿಕವಾಗಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ವೀಕ್ಷಿಸಬಹುದು. ಪ್ರವೇಶ ಉಚಿತವಾಗಿರುತ್ತದೆ ಎಂದು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

19-10-2021 Vartha Bharati Pg 03



ನ.11ರಿಂದ ಕೃಷಿ ಮೇಳ

■ ವಿಕ ಸುದ್ದಿಲೋಕ ಬೆಂಗಳೂರು

ಕೃಷಿ ವಿವಿಯು ನ.11ರಿಂದ 14ರವರೆಗೆ ಕೃಷಿ ಮೇಳವನ್ನು ಆಫ್‌ಲೈನ್ ಮತ್ತು ಆನ್‌ಲೈನ್‌ನಲ್ಲಿ ನಡೆಸಲು ದಿನಾಂಕ ನಿಗದಿ ಪಡಿಸಿದೆ. ಮೇಳದಲ್ಲಿ ಆಧುನಿಕ ಕೃಷಿ ತಂತ್ರಜ್ಞಾನಗಳು, ಕೃಷಿ ಎಂಜಿನಿಯರಿಂಗ್ ಮತ್ತು ಕೃಷಿ ಪರಿಕರಗಳನ್ನು ಒಳಗೊಂಡ 250 ಮಳಿಗೆಗಳಿರುತ್ತವೆ.

ನಾನಾ ಇಲಾಖೆಗಳ ಸಹಕಾರದೊಂದಿಗೆ ಕೃಷಿ ಮೇಳವನ್ನು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ಕೋವಿಡ್ ನಿಯಮಗಳ ಅನುಸಾರ ಮೇಳ ಆಯೋಜಿಸಿದೆ.

ಕೃಷಿ ಮೇಳದಲ್ಲಿ ಕೃಷಿ ವಿವಿ ಹೊರತಂದಿರುವ ನೂತನ 10 ತಳಿಗಳು ಮತ್ತು 28 ಕೃಷಿ ತಂತ್ರಜ್ಞಾನಗಳನ್ನು ಬಿಡುಗಡೆಗೊಳಿಸಲಾಗುತ್ತದೆ. ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿದ ರೈತರಿಗೆ ರಾಜ್ಯ, ಜಿಲ್ಲಾ ಮತ್ತು ತಾಲೂಕು ಮಟ್ಟದ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಗುವುದು ಎಂದು ವಿವಿಯ ವಿಸ್ತರಣಾ ನಿರ್ದೇಶಕ ಎನ್. ದೇವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

19-10-2021 Vk

Krishi Mela from Nov. 11

SPECIAL CORRESPONDENT
BENGALURU

This year's edition of Krishi Mela of the University of Agricultural Sciences-Bengaluru will be held from November 11 to 14 on the GKVK campus.

According to a release from the university, the mela will be held both on physical and virtual platforms. As many as 10 new crop varieties and 28 new farm technologies will be released at the event, which is to be held as per COVID-19 protocols. The mela will also have an exhibition on farm machinery and technology in over 250 stalls. State, district, and taluk-level awards will be presented to innovative farmers on the occasion.